



**ಆಧುನಿಕ ಜಗತ್ತಿನ ಮಾಯಾಲೋಕ, ಜಾನಪದವಾಗಿರುವ ಸಿನಿಮಾ ಹಲಬಗೆಯಲ್ಲಿ ನೋಡುಗರನ್ನು ಕಾಡುತ್ತ, ಪರವಶಗೊಳಿಸುತ್ತ ಬಂದಿದೆ. ವಿಶಿಷ್ಟ ಸಿನಿಮಾಗಳ ಮಾಂತ್ರಿಕತೆಯನ್ನು ಸಿನಿರಸಿಕರಿಗೆ ಇಲ್ಲಿ ಪರಿಚಯಿಸಲಾಗುತ್ತದೆ. ತಮ್ಮ ಚಿತ್ತವನ್ನು ಸೂರೆಗೊಂಡ, ಮನಸಿನ ಪುಟದಲ್ಲಿ ದಾಖಲಾದ ಅನನ್ಯ ಸಿನಿಮಾ ಒಂದರ ಚಿತ್ರಕ ಬರವಣಿಗೆ ಇಲ್ಲಿದೆ**

'ಮಕ್ಕಳ ಸಂಗದೊಳೆಚ್ಚರಗೊಳ್ಳಲಿ ಆನಂದದ ಆ ದಿವ್ಯಶಿಶು' ಎನ್ನುವ ಕುವೆಂಪು ಅವರ ಮಾತನ್ನು ಅನುಭವಕ್ಕೆ ತಂದುಕೊಡುವ ಅಪೂರ್ವ ಸಿನಿಮಾ 'ದಿ ಬಿಫ್‌ಜಿ' (ದಿ ಬಿಗ್ ಫ್ರೆಂಡ್ಲಿ ಜೈಂಟ್). ವಿಶ್ವ ಸಿನಿಮಾ ಜಗತ್ತಿನ ಶ್ರೇಷ್ಠ ಕಲಾಕಾರರಲ್ಲೊಬ್ಬರಾದ ಸ್ಟೀವನ್ ಸ್ಪಿಲ್‌ಬರ್ಗ್ ನಿರ್ದೇಶನದ ಈ ಸಿನಿಮಾ, 'ಮಕ್ಕಳ ಸಿನಿಮಾ' ಎನ್ನುವ ಲೇಬಲ್ ಹಚ್ಚಿಕೊಂಡಿದ್ದರೂ ಎಲ್ಲ ವರ್ಗದ ಸಹೃದಯರನ್ನೂ ರಂಜಿಸಬಲ್ಲ ಗುಣ ಹೊಂದಿದೆ. 2016ರಲ್ಲಿ ತೆರೆಕಂಡ ಈ ಅಮೆರಿಕನ್ ಸಿನಿಮಾ ಲಾಭದ ಗಳಿಕೆಯಲ್ಲಿ ಹೆಚ್ಚು ಸುದ್ದಿ ಮಾಡದಿದ್ದರೂ, ತನ್ನ ವಿಶಿಷ್ಟ ಕಥನ ಹಾಗೂ ಬಿಂಬಶ್ರೀಮಂತಿಕೆಯ ಕಾರಣದಿಂದಾಗಿ ಸಹೃದಯರ ಗಮನಸೆಳೆದಿದೆ.

ಬ್ರಿಟಿಷ್ ಕಾದಂಬರಿಕಾರ ರೋಆಲ್ಡ್ ಡಾಲ್ (Roald Dahl) ಅವರ 'ದಿ ಬಿಎಫ್‌ಜಿ' ಕಾದಂಬರಿಯನ್ನು ಆಧರಿಸಿರುವ ಸಿನಿಮಾ ಇದು. ಶೀರ್ಷಿಕೆಯಲ್ಲಿನ 'ಬಿಗ್ ಫ್ರೆಂಡ್ಲಿ ಜೈಂಟ್' ಎನ್ನುವ ವಿಶೇಷಣವೇ ಸಿನಿಮಾದ ಕಥೆಯನ್ನು ಹೇಳುವಂತಿದೆ. ಗೂನುಬೆನ್ನಿನ ದೈತ್ಯ ರಕ್ಕಸ ಹಾಗೂ ಕಾಮನಬಿಲ್ಲಿನಂಥ ಸೋಫಿ ಎನ್ನುವ ಪುಟಾಣಿ ಹುಡುಗಿಯೊಬ್ಬಳ ಸ್ನೇಹದ ಕಥನವಿದು.

ಸೋಫಿ ಲಂಡನ್ ನಗರದ ಅನಾಥಾಲಯವೊಂದರಲ್ಲಿ ಆಶ್ರಯ ಕಂಡುಕೊಂಡಿರುವ ಹುಡುಗಿ. ಇಡೀ ನಗರ ನಿದ್ದೆಗೆ ಜಾರಿರುವ ಸರಿರಾತ್ರಿಯಲ್ಲಿ ಓದುತ್ತಾ ಕೂತ ಅವಳು ಕಿಟಕಿಯಾಚೆಗಿನ ದೈತ್ಯನನ್ನು ಆಕಸ್ಮಿಕವಾಗಿ ನೋಡಿಬಿಡುತ್ತಾಳೆ. ಮನುಷ್ಯಲೋಕದಲ್ಲಿ ತನ್ನ ಇರುವು ಬಹಿರಂಗಗೊಂಡಿದ್ದಕ್ಕೆ ಇರುಸುಮುರುಸುಗೊಳ್ಳುವ ದೈತ್ಯ, ಸೋಫಿಯನ್ನು ಎತ್ತಿಕೊಂಡು ತನ್ನ ಲೋಕಕ್ಕೆ ಹೋಗುತ್ತಾನೆ. ಅದೊಂದು ಭಯಾನಕ